Journals
Association of India

ISSN-2454-678
RNI - KARKAN24138/8-7-2014-

# SANSHODHANA MARGA
# ಸಂಶೋಧನಾ ಮಾರ್ಗ

*Peer Reviewed Journal of Social Science, Humanities and Languages*

-4, ಸಂಚಿಕೆ -5 ಮೇ 16, 2019 ರಿಂದ ಜೂನ್ 31, 2019 ರವರೆಗೆ, ಪುಟಗಳು III+150 ರೂ. 150/-
e-4. Issues-5, May 16, 2019 to June 31, 2019 Pages III+150 Rs. 150/-

Chief Editor
**Dr. Madhu,** *Ph.D.*

Published by
**stitute of Praja Vikasa**
Mysuru

Journals
Association of India

VOL-4, ISSUE-4, May 16, 2019 to June 31, 2019 RNI - KARKAN24138/8-7-2014-TC ISSN-2454-678X
ಸಂಪುಟ-4, ಸಂಚಿಕೆ-4, ಮೇ 16, 2019 ರಿಂದ ಜೂನ್ 31, 2019

ಪರಿವಿಡಿ


| | | ಪು.ಸಂಖ್ಯೆ |
|---|---|---|
| 1 | ಷಟ್ಪದಿ ಸಾಹಿತ್ಯದಲ್ಲಿ ಕಾವ್ಯ ಮೀಮಾಂಸೆ<br>*ಬಸವರಾಜು .ಕೆ.ಆರ್. | 1–5 |
| 2 | ಹಾಸನ ಜಿಲ್ಲೆಯ ಸಂತೆಯ ವೈವಿಧ್ಯತೆಗಳು<br>*ವೀಣಾ.ಕೆ.ಎಸ್ | 6–17 |
| 3 | ಮಹದೇಶ್ವರ ದೇವರ ಗುಡ್ಡರ ದೀಕ್ಷಾ ವಿಧಾನ<br>* ಮಹದೇವಸ್ವಾಮಿ ಪಿ.<br>* ಡಾ.ಟಿ.ಕೆ.ಕೆಂಪೇಗೌಡ | 18–24 |
| 4 | ಮಹದೇಶ್ವರ ದೇವರ ಗುಡ್ಡರ ಪರಿಕರಗಳು<br>* ಮಹದೇವಸ್ವಾಮಿ ಪಿ.<br>* ಡಾ.ಟಿ.ಕೆ.ಕೆಂಪೇಗೌಡ | 25–33 |
| 5 | ಜೀವಪರ ಚಿಂತಕಿ – ಸಾಹಿತಿ ಸಾರಾ ಅಬೂಬಕ್ಕರ್<br>* ರಂಗಸ್ವಾಮಿ.ಎಚ್.ಟಿ. | 33–40 |
| 6 | ದಮನಿತ ಲೋಕದ ದನಿಯಾಗಿ ಎ.ಕೆ. ಹಂಪಣ್ಣ ಅವರ ಕಾವ್ಯ<br>* ರಮೇಶ್ ಎಂ. | 41–48 |
| 7 | ಸಂತ ಚನ್ನಯ್ಯ<br>* ಮುತ್ತುಕುಮಾರ್ ಎನ್.ಎಂ. | 49–52 |
| 8 | ಮಲೆಯ ಮಾದೇಶ್ವರ ಕಾವ್ಯ ಸ್ತ್ರೀಸಂಕಥನದ ನೆಲೆಗಳು<br>* ಕೆ. ಸಣ್ಣಕೊಟ್ರಮ್ಮ | 53–57 |
| 9 | ಮಂಟೇಸ್ವಾಮಿ ಮಹಾಕಾವ್ಯದಲ್ಲಿ ಮಹಿಳಾ ಪ್ರತಿನಿಧೀಕರಣ<br>* ಕೆ. ಸಣ್ಣಕೊಟ್ರಮ್ಮ | 58–61 |
| 10 | ಹೊಯ್ಸಳರ ಕಾಲದ ಅಜ್ಞಾತ ದೇವಾಲಯ<br>*ಚಿದಂಬರ.ಡಿ | 62–77 |
| 11 | ಜಿ.ಎಸ್. ಶಿವರುದ್ರಪ್ಪ ಅವರ ಕಾವ್ಯದಲ್ಲಿ ಮಾತೃಕೇಂದ್ರಿತ ಕವಿತೆಗಳು<br>* ನಾಗೇಶ್ ಕೆ.ಎಂ. | 78–86 |
| 12 | ಅಂಬೇಡ್ಕರ್ ಮತ್ತು ಕಾಶ್ಮೀರ ಹಲವಾರು ಮಿಥ್ಯೆಗಳು<br>* ಮಾಯಾದೇವಿ ಎನ್. | 87–97 |
| 13 | ಮಂಟೇಸ್ವಾಮಿ ಜನಪದ ಮಹಾಕಾವ್ಯದಲ್ಲಿ ವಿಭಕ್ತಿ ಪ್ರತ್ಯಯಗಳು.<br>*ಚಂದ್ರಮೌಳಿ ಎಸ್.ವಿ. | 98–104 |
| 14 | A Note on the Dalit Autobiographies translated into Kannada<br>* Sowmya S. | 105–110 |
| 15 | A study of Relationship among Scientific Creativity and Achievement in Science of 9th Standard Students in Government Rural High Schools of Tumakuru Taluk<br>*Manohar S.S<br>**Dr.Ningamma C. Betsur | 111–118 |
| 16 | Role of Interpersonal Communication in Imparting Nutrition and Health Awareness among Rural Women: A Study<br>*Harshitha B. H.<br>**Dr. N. Sanjeev Raj: | 119–127 |
| 17 | THE DRAFT REPORT TO EVOLVE A NATIONAL EDUCATION POLICY LACKS PERSPECTIVE TO BUILD AN EGALITARIAN SOCIETY BASED ON THE CONSTITUTIONAL VALUES A CONSTRUCTIVE CRITIQUE<br>* By Niranjanaradhya. V.P. | 128–140 |

## ಜೀವಪರ ಚಿಂತಕಿ – ಸಾಹಿತಿ ಸಾರಾ ಅಬೂಬಕ್ಕರ್

ರಂಗಸ್ವಾಮಿ.ಎಚ್.ಟಿ.

ಸ್ಪಷ್ಟ ಸ್ತ್ರೀಪರ ನಿಲುವಿನಲ್ಲಿ ಮುಸ್ಲಿಂ ಧಾರ್ಮಿಕ ಕಂದಾಚಾರಗಳಿಗೆ ಕೈ ಹಾಕಿದ ಮೊದಲ ಲೇಖಕಿ ಸಾರಾ. ಹೆಣ್ಣನ್ನು ಅಧೀನವಾಗಿಸಿಕೊಳ್ಳುವ ಪುರುಷ ಮನೋವೃತ್ತಿ ಧಾರ್ಮಿಕ ವಿಧಿ-ನಿಯಮಗಳನ್ನು ಅನುಕೂಲ ಸಿಂಧುವಾಗಿ ತಿರುಚಿತು. ಮುಸ್ಲಿಂ ಸಂಪ್ರದಾಯ ಬದ್ಧ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣು ವ್ಯಕ್ತಿ ಎಂಬ ಮಾನ್ಯತೆಯನ್ನೇ ಕಳೆದುಕೊಂಡವಳು. ಹತ್ತಿಕ್ಕಲ್ಪಟ್ಟ ಮುಸ್ಲಿಂ ಹೆಣ್ಣಿನ ಯಾತನೆಯ ಪದರುಗಳನ್ನು ವೈಚಾರಿಕ ದಿಟ್ಟತನದಿಂದ ಅನಾವರಣಗೊಳಿಸಿದರು. ಗ್ರಾಮೀಣ ಸಂಪ್ರದಾಯಬದ್ಧ ಕೌಟುಂಬಿಕ ಚೌಕಟ್ಟಿನ ಬಡ, ಅಜ್ಞಾನಿ ಶೋಷಿತ ಮುಸ್ಲಿಂ ಹೆಣ್ಣು ಇವರ ಕೃತಿಗಳಲ್ಲಿ ಚಿತ್ರಿತಗೊಂಡಿದ್ದಾಳೆ. ಹೆಣ್ಣನ್ನು ಚಪ್ಪಲಿಯಂತೆ ಕಂಡ ಲಂಪಟ ವ್ಯವಸ್ಥೆಯ ಪ್ರತಿಭಟನೆ ಇವರ ಬಹುತೇಕ ಕಥೆಗಳ ವಸ್ತು. ಚಪ್ಪಲಿಗಳು ಕಥಾ ಸಂಕಲನದ ಮೂಲಕ, ಸಾಹಿತ್ಯ ಕ್ಷೇತ್ರಕ್ಕೆ ಇದುವರೆಗೂ ಅಪರಿಚಿತವಾಗಿದ್ದ ಮುಸ್ಲಿಂ ಹೆಣ್ಣಿನ ದಾರುಣ ಚಿತ್ರಣವನ್ನು ಕೊಟ್ಟರು. ಕಾದಂಬರಿ ಮಾಧ್ಯಮದಲ್ಲಿ ನಿಖರ ಸ್ತ್ರೀವಾದಿ ಪರಿಕಲ್ಪನೆಯಿಂದ ಧರ್ಮಶಾಸ್ತ್ರಗಳ ಪುನರ್ ಪರಿಶೀಲನೆಗೆ ತೊಡಗುವ ಸಾರಾ, ಕಥಾ ಮಾಧ್ಯಮದಲ್ಲಿ ಸಂವೇದನೆಯ ವಿಶಾಲ ಪರಿಧಿಯನ್ನು ದರ್ಶಿಸುತ್ತಾರೆ.

ಮುಸ್ಲಿಂ ಮಹಿಳೆಯರಿಗೆ ತಮ್ಮ ಅನಿಸಿಕೆಗಳನ್ನು ಹೊರಹಾಕಲು ಪ್ರತ್ಯೇಕ ವೇದಿಕೆಗಳೇ ಇಲ್ಲದ ಕಾಲದಲ್ಲಿ, ಮುಸ್ಲಿಂ ಮಹಿಳೆಯರ ದನಿಯಾಗಿ ಸಾಹಿತ್ಯದ ಮೂಲಕ ತಮ್ಮ ಅನಿಸಿಕೆಯನ್ನು ಅಭಿವ್ಯಕ್ತಿಸಿದ ಲೇಖಕಿ ಸಾರಾ ಅಬೂಬಕ್ಕರ್. ಇವರು ಮುಸ್ಲಿಂ ಮಹಿಳೆಯರ ನೋವು, ಯಾತನಾಮಯ ಜೀವನ, ತಲಾಕ್ ಸಂಪ್ರದಾಯ, ಮಕ್ಕಳಾದ ನಂತರದ ಅವರ ಅಸಹನೀಯ ಬದುಕನ್ನು ತಮ್ಮ ಸಾಹಿತ್ಯದಲ್ಲಿ ಚಿಂತನೆಗೊಳಪಡಿಸಿದ್ದಾರೆ. ಇವರು ಹೊತ್ತಿಸಿದ ಅಕ್ಷರ ಕ್ರಾಂತಿಯ ಚಹರೆ ಇಂದಿಗೂ ಪ್ರಜ್ವಲಿಸುತ್ತಿದೆ. ಗಡಿನಾಡು ಕಾಸರಗೋಡಿನಲ್ಲಿ ಜನಿಸಿ ಮಂಗಳೂರಿನಲ್ಲಿ ತಮ್ಮ

* ರಂಗಸ್ವಾಮಿ.ಎಚ್.ಟಿ., ಸಂಶೋಧಕರು, ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಸ್ನಾತಕೋತ್ತರ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಅಂಬೇಡ್ಕರ್ ವೀದಿ, ಬೆಂಗಳೂರು-01.

ISSN-2454-678X
VOL-4, ISSUE-4, May 16, 2019 to June 31, 2019 RNI - KARKAN24138/8-7-2014-TC
ಸಂಪುಟ-4, ಸಂಚಿಕೆ-4, ಮೇ 16, 2019 ರಿಂದ ಜೂನ್ 31, 2019

ವೈವಾಹಿಕ ಜೀವನವನ್ನು ಆರಂಭಿಸಿದ ಇಪ್ಪತ್ತಾರು ವರ್ಷಗಳ ನಂತರ ತಮ್ಮ ನಲವತ್ತೆರಡರ ಹರೆಯದಲ್ಲಿ 'ಚಂದ್ರಗಿರಿ ತೀರದಲ್ಲಿ' ಕಾದಂಬರಿಯ ಮೂಲಕ ಕನ್ನಡ ಸಾಹಿತ್ಯ ಲೋಕದೊಳಗೆ ಪ್ರವೇಶ ಮಾಡಿದರು. ಕಥೆ, ಕಾದಂಬರಿ ಹಾಗೂ ವೈಚಾರಿಕ ಲೇಖನಗಳ ಮೂಲಕ ತಮ್ಮ ಸಮುದಾಯದೊಳಗಿನ ಮಹಿಳೆಯರಿಗೆ ಸಂಬಂಧಿಸಿದ ನೋವು, ನಲಿವು, ಸಂಪ್ರದಾಯ ನಿಷ್ಠೆಗಳು ಪ್ರಾದೇಶಿಕವಾಗಿ ಯಾವ ಬಗೆಯ ಭಿನ್ನತೆಯನ್ನು ಪಡೆದುಕೊಂಡಿವೆ ಎಂಬುದನ್ನು ಇವರ ಸಾಹಿತ್ಯ ಪರಿಚಯಿಸುತ್ತದೆ.

ಸ್ತ್ರಿ ಕಾಳಜಿಯುಳ್ಳ ವ್ಯವಸ್ಥೆಯ ವಿರುದ್ಧ ಹೋರಾಟದ ದನಿಯೆತ್ತುವ ಧೈರ್ಯ ಮಾಡಿದ ಲೇಖಕಿಯರಲ್ಲಿ ಸಾರಾ ಅವರು ಅಗ್ರಗಣ್ಯರಾಗಿ ನಿಲ್ಲುತ್ತಾರೆ. ಈ ಮೂಲಕ ಮುಸ್ಲಿಂ ಸಮುದಾಯದ ಮಹಿಳೆಯರಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವ ಮನೋಭಾವವನ್ನು ಮೂಡಿಸಿದರು. ಒಮ್ಮೆ ಸಮುದಾಯದ ಪ್ರಜ್ಞೆ ಜಾಗೃತಗೊಂಡಿತೆಂದರೆ ತಮ್ಮ ಸಮುದಾಯದ ಹೆಣ್ಣು ಮಕ್ಕಳು ಇತರ ಸಮುದಾಯ್ದವರಂತೆ ಸುಶಿಕ್ಷಿತರಾಗುತ್ತಾರೆ ಎಂಬ ಗಾಢ ನಂಬಿಕೆ ಇವರಿಗಿದ್ದ ಕಾರಣ ಅವರು ತಾವು ಒಮ್ಮೆ ಇಟ್ಟ ಹೆಜ್ಜೆಯಿಂದ ಹಿಮ್ಮೆಟ್ಟುವ ನಿರ್ಧಾರಕ್ಕೆ ಬರಲಿಲ್ಲ. ಆದರೆ ಇವರ ಈ ನಿರ್ಧಾರ ಮುಸ್ಲಿಂ ಮೂಲಭೂತವಾದಿಗಳ ವಿರೋಧಕ್ಕೆ ಕಾರಣವಾಯಿತು. ಇವರಿಂದ ಜೀವ ಬೆದರಿಕೆಯ ಸಂದರ್ಭಗಳು ಏರ್ಪಟ್ಟರೂ ಎದೆಗುಂದದೆ ತಮ್ಮ ನಿಲುವಿಗೆ ಬದ್ಧರಾಗುವ ದಿಟ್ಟ ನಿರ್ಧಾರ ಕೈಗೊಂಡರು.

"ಪ್ರವಾಹದ ವಿರುದ್ಧ ಈಜುವುದೇ ತನ್ನ ಬದುಕು" ಎನ್ನುವ ಸಾರಾ ಅಬೂಬಕ್ಕರ್ ಆಧುನಿಕ ವಿಚಾರಧಾರೆಗಳಿಗೆ ಸದಾ ತೆರೆದ ಮನಸ್ಸುಳ್ಳವರಾಗಿದ್ದಾರೆ. ಅನ್ಯಾಯವನ್ನು ಕಂಡರೆ ತಕ್ಷಣ ಪ್ರತಿಭಟಿಸುವ ಸ್ವಭಾವ ಸಾರಾರವರದಾಗಿದೆ. 'ಹೆಣ್ಣೊಬ್ಬಳು ಕಲಿತರೆ ಶಾಲೆಯೊಂದು ತೆರೆದಂತೆ' ಎಂಬ ಗಾದೆ ಮಾತಿಗೆ ಜೀವಂತ ಸಾಕ್ಷಿಯಂತಿರುವ ಸಾರಾ ಅವರದು ಸರಳ ಸ್ನೇಹಮಯ ವ್ಯಕ್ತಿತ್ವ ಕೋಮು ಸೌಹಾರ್ದದ ಬಗೆಗೆ ಅತೀವ ಕಾಳಜಿಯನ್ನು ಹೊಂದಿರುವ ಇವರು ಜನಜೀವನದ ಸ್ವಾಸ್ಥ್ಯವನ್ನು ಕೆಡಿಸುವ ಮೂಲಭೂತವಾದ ತಮ್ಮ ಸಮುದಾಯದೊಳಗಷ್ಟೇ ಅಲ್ಲದೇ ಅದು ಎಲ್ಲಿಯೇ ಕಂಡರೂ ಅದನ್ನು ತಮ್ಮ ಬರಹಗಳ ಮೂಲಕ ಖಂಡಿಸುತ್ತಾ ಬಂದಿದ್ದಾರೆ. ಧರ್ಮದ ಬಗ್ಗೆ ಗಾಢ ಅಭಿಮಾನ ಇದ್ದವರಾಗಿಯೂ ಧರ್ಮದೊಳಗಿನ ಹುಳುಕು-ಶೋಷಣೆ, ಹಿಂಸೆ-ತಾರತಮ್ಯ ಇತ್ಯಾದಿಗಳನ್ನು ಎತ್ತಿ ತೋರುತ್ತಾರೆ.

ಶಿಕ್ಷಣದಂಥ ಮೂಲಭೂತ ಅವಶ್ಯಕತೆಯಿಂದಲೂ ವಂಚಿತಳಾಗುವ, ಮನೆಯಂಗಳಕ್ಕಿಳಿದು ಸೂರ್ಯ ಸ್ಪರ್ಶವನ್ನು ಸ್ವಚ್ಛ ಗಾಳಿಯನ್ನು ಉಸಿರಾಡುವ ಸಾಧ್ಯತೆಯೂ ಇಲ್ಲದ ಮುಸ್ಲಿಂ ಹೆಣ್ಣು, ಪುರುಷನ ಭೋಗದ ಸಾಧನ ಮಾತ್ರವಾಗಿದ್ದವಳು. 'ತಲಾಕ್'ನಂಥ ಧಾರ್ಮಿಕ ಕಟ್ಟಳೆಗಳು ಸರಳೀಕರಣಗೊಂಡ ವಾಸ್ತವದಲ್ಲಿ ನಿಂತ ನೆಲ ನಡುಗುವ ಭಯದಲ್ಲೇ ಬದುಕುತ್ತ ಸಹಜ ಸಂವೇದನೆಯನ್ನು ಕಳೆದುಕೊಂಡವಳು. ಪ್ರಬಲ ಕಾರಣವಿಲ್ಲದೆಯೂ ಪತಿಯಿಂದ ಪರಿತ್ಯಕ್ತಳಾಗಿ ವಿಚಿತ್ರ ಸಾಮಾಜಿಕ ತುಳಿತಕ್ಕೆ ನಲುಗುವ, ಮಾನಸಿಕವಾಗಿ ಜರ್ಝರಿತಳಾಗುವ ಹೆಣ್ಣಿನ ಹಲವು ಮುಖಗಳು ಇಲ್ಲಿ ಬಂದಿವೆ. ಸಾರಾರವರ ಮೂಲಕ ಮಹಿಳಾ ಸಾಹಿತ್ಯದ ಹೊಸ ಆಯಾಮವೊಂದು ತೆರೆದುಕೊಂಡಿತು.

ಸಾರಾ ಅಬೂಬಕ್ಕರ್ ಕಥೆಗಳ ಇನ್ನೊಂದು ಮಗ್ಗಲು ಅವರ ಸಮಕಾಲೀನ ವಾಸ್ತವದ ಸ್ಪಂದನವಾಗಿದೆ. ಬಡತನ, ಕೋಮು ಗಲಭೆ, ಚುನಾವಣೆ, ಉಳ್ಳವರ ದರ್ಪ, ರಾಜಕೀಯ ವಿಡಂಬನೆ, ಸಾಮಾಜಿಕ ಸಮಸ್ಯೆಗಳ ಗಮನ ಇವರ ಕಥೆಗಳ ಭಿತ್ತಿಯಲ್ಲಿದೆ. ಪ್ರಜ್ಞಾವಂತ ಮನಸ್ಸಿನ ಆರೋಗ್ಯ ಪೂರ್ಣ ಸಂವೇದನೆಯನ್ನು ಇಂಥಲ್ಲೆಲ್ಲ ಕಾಣುತ್ತೇವೆ. ವಿಷಮ ವಾಸ್ತವದ ಚಿತ್ರಣದಲ್ಲೇ ಇಲ್ಲಿಯ ಕಥೆಗಳು ವಿರಮಿಸುವುದಿಲ್ಲ. ಇಂಥ ದುರಂತ ವರ್ತಮಾನವನ್ನು ಮೀರುವ ಛಲ ಮತ್ತು ಜೀವಪರ ನಿಲುವು ಇಲ್ಲಿಯ ಕಥೆಗಳ ಯಶಸ್ಸಿನ ದೃಷ್ಟಿಯಿಂದಲೂ ಮಹತ್ವಪೂರ್ಣವಾದದ್ದು.

ವೈಚಾರಿಕ ಪ್ರಬುದ್ಧ ನಿಲುವಿನ ಕಥೆಗಳು, ಸರಳ ಸಹಜ ನಿರೂಪಣಾ ಕ್ರಮದಿಂದ ಹೃದಯ ತಟ್ಟುತ್ತವೆ. ಭಾವೋದ್ವೇಗವನ್ನು ನಿಯಂತ್ರಿಸಿದ ನಿರ್ದಿಷ್ಟ ನಿರೂಪಣೆ ಮತ್ತು ಆರ್ದ್ರ ಭಾಷೆಗಳ ಸಮ್ಮಿಲನ ಇಲ್ಲಿಯ ಕಥೆಗಳಲ್ಲಿದೆ. ಚಪ್ಪಲಿಗಳು ಸಂಕಲನದಲ್ಲಿ ಇಂಥ ಬರವಣಿಗೆಯೆಡೆಗೆ ತುಡಿದ ಸಾರಾ 'ಪಯಣ ಮತ್ತು ಇತರ ಕಥೆಗಳು' ಸಂಕಲನದಲ್ಲಿ ಭಾಷೆಯ ಸೃಜನಶೀಲ ಸಾಮರ್ಥ್ಯವನ್ನು ದುಡಿಸಿಕೊಳ್ಳುವ ಕಲಾತ್ಮಕ ಕಾಳಜಿಯನ್ನು ತೋರುತ್ತಾರೆ. ಎರಡನೆಯ ಸಂಕಲನ ಸಂಕೀರ್ಣ ಆಶಯವನ್ನೊಳಗೊಂಡಿದ್ದು ಇಡೀ ಕಥೆ 'ವಸ್ತುಧ್ವನಿ'ಯಾಗುವ ಪ್ರಕ್ರಿಯೆ ಇಲ್ಲಿದೆ. ತಾದಾತ್ಮ್ಯಪೂರ್ಣ ನಿರೂಪಣೆಯಿಂದಾಗಿ ಆಶಯ ಮತ್ತು ಅಭಿವ್ಯಕ್ತಿಗಳ ಅನನ್ಯತೆ ಸಾಧಿತವಾಗುತ್ತದೆ. ಸಾಂಕೇತಿಕವಾಗಿ ಸಾಗುವ ಕಥನ ಕ್ರಮ ಗಂಭೀರ ಚಿಂತನಾರ್ಹ ವಸ್ತುವನ್ನೊಳಗೊಂಡಿರುವುದು ಇಲ್ಲಿಯ ಕಥೆಗಳ ಶ್ರೇಷ್ಠ ಲಕ್ಷಣವಾಗಿದೆ. 'ಪಯಣ' ಮತ್ತು 'ಹುಟ್ಟು' ಸಾರಾರವರ ಅತ್ಯುತ್ತಮ ಕಥೆಗಳು. ಕಥೆಯ ಒಳ ಮತ್ತು ಹೊರ ಆವರಣಗಳೆರಡೂ

ISSN-2454-678X
VOL-4, ISSUE-4, May 16, 2019 to June 31, 2019 RNI - KARKAN24138/8-7-2014-TC
ಸಂಪುಟ-4, ಸಂಚಿಕೆ-4, ಮೇ 16, 2019 ರಿಂದ ಜೂನ್ 31, 2019

ಹೀಗೆ ಮಾನವೀಯತೆಯನ್ನು ಒಂದು ಹಕ್ಕಾಗಿ ಪ್ರತಿಪಾದಿಸಿದ ಸಾರಾ ಅಬೂಬಕ್ಕರ್ ಹೊಸ ಸಂವೇದನೆಯ ಹೊಸ ಆಶಯಗಳೊಂದಿಗೆ ಸಾಹಿತ್ಯ ಕ್ಷೇತ್ರದಲ್ಲಿ ತೆರೆದುಕೊಂಡರು. ಮಹಿಳಾ ಸಾಹಿತ್ಯದಲ್ಲಿ ಅಥೆಂಟಿಕ್ ಆದ ಮುಸ್ಲಿಂ ಸಂವೇದನೆಯ ಹೊನಲನ್ನು ಹರಿಸಿದ್ದಾರೆ. ಎಲ್ಲಾ ಧಾರ್ಮಿಕ ವಿಧಿ ನಿಯಮಗಳಂತೆ ಮುಸ್ಲಿಂ ಧರ್ಮವೂ ಕೂಡ ಕುರಾನಿನ ಆಶಯಗಳಾಚೆ ಕಂದಾಚಾರವಾಗಿ ಬೆಳೆದು ನಿಂತಿದೆ. ಪುರುಷ ಪ್ರಧಾನ ವ್ಯವಸ್ಥೆಯು ಧರ್ಮ, ನ್ಯಾಯ, ನೀತಿಗಳ ಒಳಗೂ ಅಂತರ್ಗತವಾಗಿ ತನ್ನ ಹಿತಾಸಕ್ತಿಯನ್ನು ಕಾಯ್ದುಕೊಂಡು ಬಂದಿದೆ. ಮುಸ್ಲಿಂ ಸಮುದಾಯದೊಳಗಿನ ಈ ಬಗೆಯ ಧೋರಣೆಗಳನ್ನು ಸ್ತ್ರೀ ಶೋಷಣೆಯ ಪರಂಪರಾಗತ ಸ್ಪಷ್ಟತೆ ಮತ್ತು ವಾಸ್ತವದ ಭಯಾನಕತೆಯನ್ನು ಸಾರಾ ಅವರು ತೆರೆದಿಡುತ್ತಾರೆ. "ಸಾಹಿತ್ಯವೆಂಬುದು ಸಮಾಜದ ಪ್ರತಿಬಿಂಬವಾಗಬೇಕೆಂದು ಬಯಸುವವಳು ನಾನು. ಕೊಳೆತ ಭಾಗವನ್ನು ಹಾಗೆಯೇ ಮುಚ್ಚಿಟ್ಟರೆ ಇನ್ನಷ್ಟು ಕೊಳೆತು ಹೋಗುತ್ತದೆಂಬುದನ್ನು ಈಗಾಗಲೇ ನಾನು ಮನಗಂಡಿದ್ದೇನೆ. ಹೀಗೆ ಕಿತ್ತೆಸೆಯಬೇಕಾದರೆ ಮೊದಲು ಆ ಭಾಗದ ಮೇಲೆ ಬೆಳಕು ಬೀರಬೇಕು. ಆ ಬೆಳಕು ಚೆಲ್ಲಲು ಕೆಲಸವನ್ನಷ್ಟೇ ನಾನು ಮಾಡುತ್ತಿದ್ದೇನೆ" ಎಂಬ ವೈಚಾರಿಕ ಸ್ಪಷ್ಟತೆ ಮತ್ತು ಬರವಣಿಗೆಯ ಎಚ್ಚರ ಇವರ ಕೃತಿಗಳಲ್ಲಿ ಮುಖ್ಯ ಧ್ಯೇಯವಾಗಿ ಕಂಡು ಬರುತ್ತದೆ. ಎಲ್ಲ ರೀತಿಯ ಅನಿಷ್ಟಗಳನ್ನೂ ಒಕ್ಕೊರಲಿನಿಂದ ಪ್ರತಿಭಟಿಸಿದಾಗಲೇ ಶೋಷಣೆ ರಹಿತ ನವಸಮಾಜ ನಿರ್ಮಾಣಕ್ಕೊಂದು ತಳಹದಿ ನಿರ್ಮಿಸಲು ಸಾಧ್ಯ ಎನ್ನುವ ನಿಟ್ಟಿನಲ್ಲಿ ಮಾನವೀಯ ಕಳಕಳಿ ಮತ್ತು ವಿಕಾಸ ತುಡಿತದೊಂದಿಗೆ ಬರವಣಿಗೆಯಲ್ಲಿ ತೊಡಗುವ ಸಾರಾ ಅವರು ಲೇಖಕಿಯಾಗಿ ಸಂಘಟಕಿಯಾಗಿ ದುಡಿದಿದ್ದಾರೆ. ಆ ಮೂಲಕ ಕನ್ನಡ ಸಾಹಿತ್ಯ ಲೋಕದೊಳಗೆ ಜೀವಂತ ಪ್ರಜ್ಞೆಯಾಗಿ ರೂಪುಗೊಂಡಿದ್ದಾರೆ.

ಸಮಾಕಾಲೀನ ಸಾಮಾಜಿಕ, ರಾಜಕೀಯ, ಆರ್ಥಿಕ ಸ್ಪಂದನಗಳ ಕಲಾತ್ಮಕ ಅಭಿವ್ಯಕ್ತಿ ಕಥಾ ಮಾಧ್ಯಮದಲ್ಲಿದೆ. ಯಾವ ಸಂದರ್ಭದಲ್ಲೂ ಇವರದು ಶೋಷಿತಪರ ನಿಲುವು. ಹಾಗಾಗಿ ಇವರ ಕಥೆಗಳ ಪ್ರತಿಭಟನೆಯ ಧ್ವನಿ ತುಂಬ ಗಟ್ಟಿಯಾದದ್ದು. ವಾಸ್ತವದ ಭೀಕರತೆಯ ಚಿತ್ರಣದ ಅಂಚಿನಲ್ಲಿಯೇ ಅದರ ಪರಿವರ್ತನೆಯ ಸೂಕ್ಷ್ಮ ಕಂಪನವನ್ನೂ ಕೊಡುತ್ತಾರೆ. ಶ್ರೇಣಿಕೃತ ವ್ಯವಸ್ಥೆ ಮತ್ತು ದ್ವಿಸ್ತರ ನ್ಯಾಯ ನೀತಿ ಲೇಖಕಿಯನ್ನು ಕಾಡಿದೆ.